

ಎರಡು ತಿಂಗಳ ಹಿಂದೆ ಸೊರಗಿದಂತಿದ್ದು, ಹಳ್ಳದಲ್ಲಿ ಹರಿಯುತ್ತಿದ್ದ ಹೊಳೆ ಎಲ್ಲಿಲ್ಲದ ಹುಮ್ಮಸ್ಸಿನಿಂದ ಸೊಕ್ಕಿ ಹರಿಯುತ್ತಿತ್ತು. ಆನೆ ಬಂಡೆಯೆಂದು ಕರೆಯುತ್ತಿದ್ದ ಭಾರಿ ಗಾತ್ರದ ಕರಿ ಬಂಡೆಯೊಂದು ಎಲ್ಲಿದೆಯೆಂದು ಗೊತ್ತಾಗದಂತೆ ಜಲಾವೃತ್ತವಾಗಿತ್ತು. ಆನೆ ಬಂಡೆಯ ತೋಳಿನಂತೆ ಮುಂಚಾಚಿದ್ದ ಬಂಡೆಯ ಕವಲೊಂದು ನದೀ ಪಾತ್ರಕ್ಕೆ ಚಾಚಿದಂತಿದ್ದು ಅದರ ಮೇಲೇ ಊರ ಹೆಣ್ಣುಮಕ್ಕಳು ಬಟ್ಟೆಗಳನ್ನೊಗೆಯುತ್ತಿದ್ದದು ನೆನಪಾಯಿತು ಸುನಂದಾಳಿಗೆ. ಮದುವೆಯಾದ ಹೊಸತರಲ್ಲಿ ತಾನೂ ಬಟ್ಟೆ ಕುಕ್ಕೆಯನ್ನೆತ್ತಿಕೊಂಡು ಹೊಳೆಗೆ ಬರುತ್ತಿದ್ದ ದಿನಗಳ ನೆನಪಾಯಿತು. ಶ್ರಾವಣದ ಹಬ್ಬ, ವ್ರತಗಳ ದಿನಗಳ ತರುವಾಯ ತುಂಬುಹೊಳೆಗೆ ಬಾಗಿನ ಕೊಡಿಸಲು ಅತ್ತೆ ಇಲ್ಲಿ ಕರೆತರುತ್ತಿದ್ದ ಆ ದಿನಗಳ ಸಂಭ್ರಮ ಹೊಳೆಯ ಏರುವಿಕೆಯೊಂದಿಗೆ ತಂತಾನೇ ಏರುತ್ತಿತ್ತು. ಆಷಾಢ ಶುಕ್ರವಾರಗಳಲ್ಲಿ ಶುರುವಾಗುತ್ತಿದ್ದ ಸಡಗರ ವರಮಹಾಲಕ್ಷ್ಮೀ, ಗೌರಿಯವರೆಗೆ ಮುಂದುವರಿಯುತ್ತಿತ್ತು. ಹೊಳೆ ತಮ್ಮ ಬದುಕಿನ ಭಾಗವಾಗುತ್ತಿದ್ದ ಚೆಲುವು ಆಪ್ಯಾಯಮಾನವಾಗಿತ್ತು. ಎರಡು ತಿಂಗಳ ಹಿಂದೆ ತನ್ನ ಅಸ್ತಿತ್ವವೇ ಇಲ್ಲದಂತೆ ಮಿಣ್ಣಗೆ ಮೌನದಲ್ಲಿ ಹರಿಯುತ್ತಿದ್ದ ಹೊಳೆ ಇಷ್ಟು ರಭಸದಿಂದ ಭೋರ್ಗರೆದು ಹರಿಯುವ ಪರಿ... ನಿಟ್ಟುಸಿರೊಂದು ತಂತಾನೆ ಹೊರಳೆಗಳಿಂದ ಹೊರದಬ್ಬಿತು.

ಹೇಮಾವತೀ ತೀರದ ಈ ಪುಟ್ಟಹಳ್ಳಿಗೆ ತಾನು ಸೊಸೆಯಾಗಿ ಬಂದಾಗಲೂ ಈ ಸುತ್ತಲೂ ತನಗಿದ್ದ ಆದರಾಭಿಮಾಗಳಿಗೆ ಮಾರುಹೋಗಿದ್ದಳು ಸುನಂದೆ. ಹಳ್ಳಿಗಾಡಿಗೆ ಬಂದ ವಿದ್ಯಾವಂತ ಸೊಸೆಯೆಂದು ತಲೆಯ ಮೇಲಿಟ್ಟು ಮೆರೆಸಿದ್ದ ಅತ್ತೆ ಮಾವ, ತನ್ನ ನಯ ನಾಜೂಕನ್ನು ಮೆಚ್ಚುಗೆ ಕೌತುಕದಿಂದ ನೋಡುತ್ತಿದ್ದ ನಾದಿನಿಯರು. 'ಅವ್ವಾರೆ' ಎಂದು ಕರೆಯುತ್ತ ಹಿಂದೆ ಮುಂದೆ ಸುತ್ತುತ್ತಿದ್ದ ಆಳುಮಕ್ಕಳು, ರಜೆಯಲ್ಲಿ ಬಂದಾಗಲೆಲ್ಲ ತುಂಬು ಸಂಭ್ರಮದಿಂದ ಬರಮಾಡಿಕೊಳ್ಳುತ್ತಿದ್ದ ಹಳ್ಳಿಯ ಜನ, ಹೊತ್ತಿಗೊಂದು ಮಾಡಿ ಉಪಚರಿಸುತ್ತಿದ್ದ ಅತ್ತೆ, ಅವರು ಗಂಟು ಕಟ್ಟಿಕೊಡುತ್ತಿದ್ದ ಹಪ್ಪಳ, ಸಂಡಿಗೆ, ಉಪ್ಪಿನಕಾಯಿ, ಬಗೆಬಗೆಯ ತಿಂಡಿ ತಿನಿಸುಗಳು... ಬದುಕು ಎಷ್ಟು ಸುಂದರವೆನಿಸುತ್ತಿತ್ತು. ತನ್ನ ಮಗ ಚೇತನನೆಂದರೆ ಎಲ್ಲರಿಗೂ ಪ್ರಾಣ. ಅವನೂ ಅಷ್ಟೆ... ಚೇತನನೆಂದರೆ ಚೈತನ್ಯದ ಬುಗ್ಗೆಯೇ.

ಮೂರು ವರ್ಷಗಳ ಹಿಂದೆ ತನ್ನ ಆಫೀಸಿನಲ್ಲಿ ಸಹೋದ್ಯೋಗಿಯಾಗಿದ್ದ ಸಿರೀಶಾಳನ್ನು ಮನೆಗೆ ಕರೆತಂದ, ಪರಿಚಯಿಸಿದ. ಅವರಿಬ್ಬರ ಕುಲುಕುಲುನಗು, ಒಡನಾಟಗಳಿಂದಲೇ ಸುನಂದಾಳಿಗೆ ಅವರಿಬ್ಬರ ಸಂಬಂಧದ ಅರಿವಾಯಿತು. ಮಗನಿಗಾಗಿ ಜಾತಿಯ ಗೋಡೆಯನ್ನು ದಾಟುವುದು ಸುನಂದಾಳಿಗೆ ಕಷ್ಟವಾಗಲಿಲ್ಲ. ಮಾವನವರು ಇರಲಿಲ್ಲವಾಗಿ ಅತ್ತೆಯವರನ್ನು ಈ ಸಂಬಂಧಕ್ಕೆ ಒಪ್ಪಿಸುವುದು ತೊಡಕೆನ್ನಿಸಲಿಲ್ಲ. ಆಹಾ ಎನ್ನುವಷ್ಟರಲ್ಲಿ ಮದುವೆಯಾಯಿತು. ಬೆಂಗಳೂರಿನ ವಿಜಯ ನಗರದ ತನ್ನ ಮನೆಗೆ ವಧುವಾಗಿ ಪಡಿಯಕ್ಕಿ ಚಿಮ್ಮಿ ಒಳಬಂದ ಸೊಸೆಯನ್ನು ಖುಷಿ ಖುಷಿಯಾಗೇ ಮನೆ ತುಂಬಿಸಿಕೊಂಡಿದ್ದಳು ಸುನಂದೆ. ಮೊದಲ ವರ್ಷದಲ್ಲಿ ಆ ಮನೆಯ ತುಂಬ ಹರ್ಷವೇ ಹರ್ಷ. ಮಧುಚಂದ್ರದ ದಿನಗಳು ಮುಗಿದ ಮೇಲೆ, ಲವಲವಿಕೆಯಿಂದ ಮನೆಯಲ್ಲಿ ಓಡಾಡಿಕೊಂಡು ಹಾಲಲ್ಲಿ ಸಕ್ಕರೆ ಬೆರೆತಂತೆ ಬೆರೆತುಹೋಗಿದ್ದಳು.

ಇತ್ತೀಚೆಗೆ ತಮ್ಮೂರ ಹೇಮಾವತಿ ಹೊಳೆಯ ಹರಿವು, ಏರಿಳಿತ, ಭರತಗಳನ್ನು